**CW : 4**

PW : 3

# CC No.89/2024

ದಿನಾಂಕ:**16.04.2026** ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲು:ಆರೋಪಿತರ ಪರ ವಕೀಲರಿಂದ:</u>

ನಾನು ಕೂಲಿ ಕೆಲಸ ಮಾಡುತ್ತೇನೆ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿರುವ ಗೋಪಾಲಕೃಷ್ಣ ಹಾಗೂ ನಾನು ಆತ್ಮೀಯರು. ಅದೇ ರೀತಿ ಗೋಪಾಲಕೃಷ್ಣರವರ ಕುಟುಂಬದವರು ಕೂಡಾ ನನಗೆ ಆತ್ಮೀಯರು. ಮೃತ ಗೋಪಾಲಕೃಷ್ಣ ರವರ ಮನೆಗೆ ಯಾವುದೇ ಕೆಲಸ ಇದ್ದರೂ ಕೂಡಾ ನಾನು ಹೊಗುತ್ತಿದ್ದೆ. ಮೃತ ಗೋಪಾಲಕೃಷ್ಣರವರ ಮನೆಗೂ ಹಾಗೂ ನನ್ನ ಮನೆಗೂ 1 ಕಿ ಂಮೀ ಒಳಗಿನ ಅಂತರ ಇದೆ. ತಕ್ಷೀರು ನಡೆಯಲಾಯಿತು ಎನ್ನುವ ದಿನ ನಾನು ಮೃತ ಗೋಪಾಲಕೃಷ್ಣ ರವರ ಮನೆಗೆ ಹೋಗಲು ಬೆ. 6.00 ಗಂಟೆಗೆ ಬಿಟ್ಟು 6.30 ಕ್ಕೆ ಸ್ಥಳವನ್ನು ತಲುಪಿದ್ದೇನೆ. ನನ್ನ ಸ್ಕೂಟಿಯಲ್ಲಿ ನಾನು ಅವರ ಮನೆಗೆ ಹೋಗಿದ್ದೆನು. ನಾನು ಸ್ಥಳಕ್ಕೆ ತಲುಪಿದಾಗ ಅವರ ಮನೆಯ ಅಂಗಳದಲ್ಲಿ ಮೃತ ಗ ಗೋಪಾಲಕೃಷ್ಣ, ಆತನ ಹೆಂಡತಿ ಮತ್ತು ಮಕ್ಕಳು ಹಾಗೂ ಆರೋಪಿತರು ಇದ್ದರು. ಅಲ್ಲಿ ಜೆಸಿಬಿ ಕೂಡಾ ಇದ್ದು ಅದರ ಆಪರೇಟರ್ ಕೂಡಾ ಇದ್ದರು.

ನಾನು ಸ್ಥಳಕ್ಕೆ ತಲುಪಿದ ಸಮಯದಲ್ಲಿಯೇ ಟಿಪ್ಪರ್ ಲಾರಿ ಕೂಡಾ ಬಂತು. ಜೆ ಸಿ ಬಿಸಿ ಸ್ವಲ್ಪ ನಿಧಾನವಾಗಿ ಎಂದರೆ ಬೆ.7.00 ಗಂಟೆ ಸಮಯಕ್ಕೆ ಬಂತು. ಶವತನಿಖಾ ಕಾಲಕ್ಕೆ ಬರಬೇಕು ಎಂದು ಪೊಲೀಸರು ನನಗೆ ನೋಟೀಸ್ ಕೊಟ್ಟಿರಲಿಲ್ಲ.

ನಾನು ನೋಡಿದಾಗ ಟಿಪ್ಪರ್ ನ ಇಂಜಿನ್ ಚಾಲನಾ ಸ್ಥಿತಿಯಲ್ಲಿ ಇತ್ತೋ ಅಥವಾ ಇಲ್ಲವೋ ಎಂದು ನನಗೆ ಹೇಳಲಾಗುವುದಿಲ್ಲ. ಟಿಪ್ಪರ್ ನ ಚಾಲಕ ಸ್ಥಳದಲ್ಲಿ ಹೊರಗೆ ನಿಂತಿದ್ದ. ನನ್ನ ಮುಖ್ಯ ವಿಚಾರಣೆಯಲ್ಲಿ ತಿಳಿಸಿದ ಅಂಶಗಳನ್ನು ಯಾರೂ ಹೇಳಿಕೆ ಕೊಟ್ಟಿಲ್ಲ. ಅಪಘಾತ ನಾನು ಕಣ್ಣಾರೆ ನೋಡದಿದ್ದ ಕಾರಣ ಅದು ಯಾರ ತಪ್ಪಿನಿಂದ ಆಯಿತು ಎಂದು ಹೇಳಲಾಗುವುದಿಲ್ಲ. ನಾನು ಮೃತ ಗೋಪಾಲಕೃಷ್ಣರವರ ಮನೆಯಲ್ಲಿ ಪೊಲೀಸರಿಗೆ ಹೇಳಿಕೆ ಕೊಟ್ಟಿದ್ದೇನೆ. ಪೊಲೀಸರಿಗೆ ಬೇರೆ ಯಾರು ನನ್ನ ಸಂಗಡ ಹೇಳಿಕೆ ಕೊಟ್ಟರು ಎಂದು ಹೇಳಲಾಗುವುದಿಲ್ಲ. ನನ್ನ ಹೇಳಿಕೆ ಬರಹ ರೂಪದಲ್ಲಿತ್ತಾ ಅಥವಾ ಟೈಪ್ ಮಾಡಲಾಗಿತ್ತಾ ಎಂದು ಹೇಳಲಾಗುವುದಿಲ್ಲ. ಪೊಲೀಸರು ಬರೆದುಕೊಂಡ ಹೇಳಿಕೆಯಲ್ಲಿ ಏನೆಲ್ಲಾ ಬರೆಯಲಾಯಿತು ಎಂದು ಹೇಳಲಾಗುವುದಿಲ್ಲ. ಪೊಲೀಸರ ಕೋರಿಕೆಯ ಮೇರೆಗೆ ಸಹಿ ಮಾಡಿದ್ದೇನೆ. ಪಿ

**CW : 4**

PW : 3

ಎಮ್ ಜರುಗಿಸಿದ ನಂತರ ಹೇಳಿಕೆಯನ್ನು ನಾನು ಮೃತ ಗೋಪಾಲಕೃಷ್ಣ ರವರ ಮನೆಯಲ್ಲಿ ನೀಡಿದ್ದೇನೆ. ಅಲ್ಲಿ ವೈದ್ಯರು ಇದ್ದ ಬಗ್ಗೆ ನನಗೆ ನೆನಪಿಲ್ಲ. ಶವತನಿಖೆ ಮೃತ ಗೋಪಾಲಕೃಷ್ಣ ರವರ ಮನೆಯಲ್ಲಿ ಆಗಿದೆ. ಮೃತ ಗೋಪಾಲಕೃಷ್ಣ ರವರು ನನ್ನ ಆತ್ಮೀಯ ಸ್ನೇಹಿತರಾಗಿದ್ದ ಕಾರಣ ಹಾಗು ಮೃತ ಗೋಪಾಲಕೃಷ್ಣ ರವರ ಮನೆಯವರು ನನಗೆ ಪರಿಚಯದವರಾದ ಕಾರಣ ಈ ಕೇಸಿನ ಸಂಬಂಧ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ಮೃತ ಗೋಪಾಲಕೃಷ್ಣ ರವರ ಕುಟುಂಬದವರಿಗೆ ಅಪಘಾತ ಸಂಬಂಧಿತ ಪರಿಹಾರ ದೊರಕಲಿ ಎನ್ನುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರುವಿಚಾರಣೆ ಇಲ್ಲ.

ನನ್ನ ಉಕ್ತಲೇಖನದ ರೀತ್ಯ ಬಹಿರಂಗ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.

ಓ.ಹೇ.ಕೇ.ಸರಿ.ಇದೆ.

ಹೆಚ್ಚುವರಿ ಹಿರಿಯ ವ್ಯವಹಾರಿಕ ನ್ಯಾಯಾಧೀಶರು,
ಮತ್ತು ಜೆಎಂಎಫ್‌ಸಿ, ಪುತ್ತೂರು, ದ.ಕ.